5597(6244) : ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕಡುಬಡವರಿಗೆ ಪ್ರತಿ ಕೆ.ಜಿ.ಗೆ. 3 ರೂ.ಗಳ ದರದಲ್ಲಿ ಅಕ್ಕಿಯನ್ನು ವಿತರಣೆ ಮಾಡುವ ಯೋಜನೆಯನ್ನು ಜಾರಿಗೆ ತರಲಾಗಿದೆಯೇ; ತಂದಿದ್ದಲ್ಲಿ ಅದರ ವಿವರಗಳೇನು;

ಆ) ಸದರಿ ಯೋಜನೆಯ ರಾಜ್ಯಾದ್ಯಂತದ ಒಟ್ಟು ಫಲಾನುಭವಿಗಳೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು);

ಇ) ಮೇಲ್ಕಂಡ ಯೋಜನೆಗೆ ನೀಡುತ್ತಿರುವ ಅಕ್ಕಿಯನ್ನು ಸರ್ಕಾರವು ಯಾರಿಂದ ಖರೀದಿಸುತ್ತಿದೆ; (ಕೆ.ಜಿ. ವಾರು ದರಗಳ ವಿವರ ನೀಡುವುದು);

ಈ) ಸದರಿ ಯೋಜನೆಯಿಂದ ಸರ್ಕಾರಕ್ಕೆ ನಷ್ಟ ಉಂಟಾಗುತ್ತಿರುವುದು ನಿಜವೇ; ಹೌದಾದಲ್ಲಿ ಕಾರಣವೇನು; (ವಿವರ ಒದಗಿಸುವುದು);

ಉ) ಈ ಯೋಜನೆಯಲ್ಲಿನ ನಷ್ಟವನ್ನು ಸರಿದೂಗಿಸಲು ಸರ್ಕಾರದ ಪರ್ಯಾಯ ವ್ಯವಸ್ಥೆಯೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು, ರಾಜ್ಯದಲ್ಲಿನ ಎಲ್ಲಾ ಬಿಪಿಎಲ್ ಪಡಿತರ ಚೀಟಿದಾರರಿಗೆ ರೂ. 3–00 ದರದಲ್ಲಿ 20 ಕೆಜಿ ಅಕ್ಕಿ, 5 ಕೆಜಿ ಗೋಧಿಯನ್ನು ವಿತರಿಸುವ ಯೋಜನೆಯನ್ನು ಸೆಪ್ಟೆಂಬರ್ 2004 ರಿಂದ ಜಾರಿಗೆ ತರಲಾಗಿದ್ದು, ಪ್ರಸ್ತುತ ಪ್ರತಿ ಮಾಹೆ ಸೆಪ್ಟೆಂಬರ್ ಮಾಹೆಯಿಂದ ರಾಜ್ಯದಲ್ಲಿನ 6074986 ಬಿಪಿಎಲ್ ಪಡಿತರ ಚೀಟಿದಾರರಿಗೆ ಈ ಸೌಲಭ್ಯ ನೀಡಲಾಗುತ್ತಿದೆ.

ಆ) ಪ್ರಸ್ತುತ ರಾಜ್ಯದಲ್ಲಿ 6074986 ಬಿಪಿಎಲ್ ಪಡಿತರ ಚೀಟಿ ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಇ) ಈ ಯೋಜನೆಗೆ ಕೇಂದ್ರ ಸರ್ಕಾರವು 21.79 ಲಕ್ಷ ಕುಟುಂಬಗಳಿಗೆ ನೀಡುತ್ತಿರುವ ಆಹಾರಧಾನ್ಯಗಳನ್ನು ರೂ. 5–65 ದರದಲ್ಲಿ ಅಕ್ಕಿ, ರೂ. 4.15 ದರದಲ್ಲಿ ಗೋಧಿಯನ್ನು ಖರೀದಿಸಿ ಅದನ್ನು 30,50,986 ಪಡಿತರ ಚೀಟಿದಾರರಿಗೆ ಹಾಗೂ 30.24 ಲಕ್ಷ ಕುಟುಂಬಗಳಿಗೆ ರೂ. 8–30 ದರದಲ್ಲಿ ಅಕ್ಕಿ, ರೂ. 6–10 ದರದಲ್ಲಿ ಗೋಧಿಯನ್ನು ಭಾರತ ಆಹಾರ ನಿಗಮದಿಂದ ಖರೀದಿಸಿ ರಾಜ್ಯದ 6074986 ಬಿಪಿಎಲ್ ಪಡಿತರ ಚೀಟಿದಾರರಿಗೆ ರೂ. 3–00 ದರದಲ್ಲಿ ವಿತರಿಸುತ್ತಿದೆ.

ಈ) ಹೌದು. ಪ್ರಸ್ತುತ 21.79 ಲಕ್ಷ ಕುಟುಂಬಗಳಿಗೆ ಕೇಂದ್ರ ನೀಡಿಕೆ ದರ ಕೆ.ಜಿ.ಗೆ ರೂ. 5–65 ದರದಲ್ಲಿ ಖರೀದಿಸುವ ಅಕ್ಕಿಗೆ ಅಂದರೆ ಕ್ವಿಂಟಾಲ್‌ಗೆ ರಾಜ್ಯ ನೀಡುತ್ತಿರುವ ಖರೀದಿ.

| | | |
|---|---|---|
| ಸಬ್ಸಿಡಿ | – | ರೂ. 311–00 |
| ಸಗಟು ಲಾಭಾಂಶ | – | ರೂ. 20–00 |
| ಚಿಲ್ಲರೆ ಲಾಭಾಂಶ | – | ರೂ. 26–00 |
| **ಸೇರಿ ಒಟ್ಟು** | | **ರೂ. 357–00** |

ಇದರಿಂದಾಗಿ ಪ್ರತಿ ಮಾಹೆ 21.78 ಕೋಟಿ ರಾಜ್ಯ ಸರ್ಕಾರ ಭರಿಸುತ್ತಿದೆ.

ಅಕ್ಕಿ ಕೆ.ಜಿ.ಗೆ ರೂ. 8–30 ದರದಲ್ಲಿ ಎಪಿಎಲ್ ವರ್ಗದ ಅಕ್ಕಿಯನ್ನು ಎಫ್.ಸಿ.ಐ. ನಿಂದ ಖರೀದಿಸುತ್ತದೆ. ಅದರಂತೆ ಕ್ವಿಂಟಾಲ್‌ಗೆ–

ಸಬ್ಸಿಡಿ – ರೂ. 576–00

ಸಗಟು ಲಾಭಾಂಶ – ರೂ. 20–00

ಚಿಲ್ಲರೆ ಲಾಭಾಂಶ – ರೂ. 26–00

**ಸೇರಿ ಒಟ್ಟು ರೂ. 622–00**ರಂತೆ

ಪ್ರತಿ ಮಾಹೆ 37.61 ಕೋಟಿ ರೂ. ರಾಜ್ಯ ಸರ್ಕಾರ ಭರಿಸುತ್ತಿದೆ. ಜೊತೆಗೆ ಸಾಗಾಣಿಕೆ ವೆಚ್ಚ ಸರ್ಕಾರವೇ ಭರಿಸುತ್ತಿದೆ.

ಉ) ರಾಜ್ಯ ಸರ್ಕಾರವೇ ತನ್ನ ಸಂಪನ್ ಮೂಲಗಳಿಂದ ಭರಿಸುತ್ತಿದೆ.

**ANNEXURE**

**Statement of Ration Cards existing as on 30.6.2005**

| Sl. No. | Name of the District | AAY Cards | BPL Cards |
|---|---|---|---|
| 1 | 2 | 3 | 4 |
| 1 | Bagalkot | 38040 | 187222 |
| 2 | Bangalore IRA | 16609 | 200961 |
| 3 | Bangalore Rural | 27719 | 305347 |
| 4 | Bangalore Urban | 10048 | 244163 |
| 5 | Belgaum | 76207 | 509626 |
| 6 | Bellary | 52956 | 226536 |
| 7 | Bidar | 36485 | 177979 |
| 8 | Bijapur | 45941 | 201390 |
| 9 | Chamarajnagar | 28665 | 128976 |
| 10 | Chikkamagalur | 18672 | 166973 |
| 11 | Chitradurga | 36458 | 205053 |
| 12 | D. Kannada | 13246 | 113420 |
| 13 | Davanagere | 42573 | 213908 |
| 14 | Dharwad | 26379 | 181098 |
| 15 | Gadag | 25557 | 109810 |
| 16 | Gulbarga | 83500 | 365880 |
| 17 | Hassan | 19133 | 267949 |
| 18 | Haveri | 40491 | 179440 |
| 19 | Kodagu | 5008 | 73753 |
| 20 | Kolar | 50586 | 340965 |
| 21 | Koppal | 33782 | 124120 |
| 22 | Mandya | 29489 | 267759 |

| 1 | 2 | 3 | 4 |
|---|---|---|---|
| 23 | Mysore | 40374 | 331259 |
| 24 | Raichur | 48059 | 145750 |
| 25 | Shimoga | 32973 | 187420 |
| 26 | Tumkur | 42797 | 366128 |
| 27 | Udupi | 14567 | 74212 |
| 28 | Uttara Kannada | 13685 | 177889 |
| | **Grand Total** | **950000** | **6074986** |

5598(6246) : ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004–05 ಮತ್ತು 2005–06ನೇ ಸಾಲಿಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬಂದ ಒಟ್ಟು ಅನುದಾನವೆಷ್ಟು; ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಕೇಂದ್ರ ಪುರಸ್ಕೃತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳೇನು?

ಶ್ರೀಮತಿ ಭಾಗೀರಥಿ ಮುರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವಿವರ ಈ ಕೆಳಕಂಡಂತಿದೆ.

ಕೇಂದ್ರ ಸರ್ಕಾರದ ಸ್ವಾವಲಂಬನೆ (ನೋರಾಡ್ ಯೋಜನೆಯಡಿ ಬಂದಿರುವ ಅನುದಾನದ ವಿವರ:

2004–05ನೇ ಸಾಲಿನಲ್ಲಿ ರೂ. 17.50 ಲಕ್ಷ ಮತ್ತು

2005–06ನೇ ಸಾಲಿನಲ್ಲಿ ರೂ. 03.26 ಲಕ್ಷ ಅನುದಾನ ಬಂದಿದ್ದು, ಸದರಿ ಮೊತ್ತವನ್ನು ಪೂರ್ಣವಾಗಿ ಯೋಜನೆ ಅನುಷ್ಠಾನಗೊಳಿಸುವ ಸಂಬಂಧಪಟ್ಟ ತರಬೇತಿ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರದ ಸ್ವೆಪ್ ಯೋಜನೆಯಡಿ ನಿಗಮಕ್ಕೆ ಅನುದಾನ ಬಿಡುಗಡೆಯಾಗುತ್ತಿರುವುದಿಲ್ಲ. ಆದರೆ ನೇರವಾಗಿ ಕೇಂದ್ರ ಸರ್ಕಾರವೇ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುತ್ತಿದ್ದು. 2004–05 ಮತ್ತು 2005–06ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾದ ಬಗ್ಗೆ ಈ ವರದಿ/ಮಾಹಿತಿ ಬಂದಿರುವುದಿಲ್ಲ.

ಸ್ವಶಕ್ತಿ ಯೋಜನೆಗೆ ಕೇಂದ್ರ ಸರ್ಕಾರದಿಂದ 2004–05ನೇ ಸಾಲಿನಲ್ಲಿ ರೂ. 200.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಪ್ರಾರಂಭದಲ್ಲಿ ಸೇರಿದಂತೆ ರೂ. 3,63,94,510–00 ಗಳು ಖರ್ಚಾಗಿರುತ್ತದೆ. 2005–06ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅನುಷ್ಠಾನಗೊಳಿಸುವ ಕೇಂದ್ರ ಪುರಸ್ಕೃತ ಯೋಜನೆಗಳು ಈ ಕೆಳಕಂಡಂತಿವೆ: